4. ಶ್ರೀ ಡಿ. ಬಾಲಗೋಪಾಲನ್, ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಅವರು ಬೆಂಗಳೂರು ನಗರ ಕಾರ್ಪೊರೇಷನ್ನಿನ ಆಡಳಿತಾಧಿಕಾರಿಯಾಗಿ ಹೆಚ್ಚಿನ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಾರೆ.

ವಿಷಯ: ಜಿಲ್ಲಾ ಆರೋಗ್ಯ ಅಧಿಕಾರಿ ನೇಮಕ.

ಪ್ರ. 128 (55) ಶ್ರೀ ವಿ. ಧನಂಜಯ ಕುಮಾರ್ (ಮಂಗಳೂರು).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಆರೋಗ್ಯ ಅಧಿಕಾರಿಗಳ ಹುದ್ದೆಗಳ ಸಂಖ್ಯೆ ಎಷ್ಟು? ಹಾಗೂ ಎಷ್ಟು ಸಮಯದಿಂದ ಈ ಹುದ್ದೆಗಳು ಖಾಲಿ ಇವೆ;

(ಆ) ಈ ಹುದ್ದೆಗಳನ್ನು ಎಷ್ಟು ಅವಧಿಯಲ್ಲಿ ತುಂಬಲಾಗುವುದು;

(ಇ) ಈ ಹುದ್ದೆಗಳನ್ನು ಭರ್ತಿ ಮಾಡದೆ ಇರಲು ಕಾರಣಗಳೇನು?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

(ಅ) ಒಂದು. 5-9-1982 ರಿಂದ ಖಾಲಿ ಇದೆ.

(ಆ) (ಇ) ಆರೋಗ್ಯ ಅಧಿಕಾರಿಗಳು ಹಾಕಿದ್ದ 8 ರಿಟ್ ಅರ್ಜಿ ಮತ್ತು 2 ರಿಟ್ ಅಪೀಲುಗಳಲ್ಲಿ ರಾಜ್ಯದ ಉಚ್ಚ ನ್ಯಾಯಾಲಯವು ಆರ್ಡರ್ ಮಾಡಿದ್ದು ಅದನ್ನನುಸರಿಸಿ ಆರೋಗ್ಯ ಇಲಾಖೆಯ ನಿರ್ದೇಶಕರಿಂದ ಪ್ರಸ್ತಾವನೆಯನ್ನು ಕೇಳಲಾಗಿದೆ. ಅದು ಬಂದ ಕೂಡಲೇ ಪರಿಶೀಲಿಸಿ ಮೇಲ್ಕಂಡ ಖಾಲಿ ಹುದ್ದೆಯನ್ನು ಭರ್ತಿ ಮಾಡಲಾಗುವುದು.

ವಿಷಯ: ಧಾರವಾಡ ಜಿಲ್ಲಾ ಬ್ಯಾಡಗಿ ಸರ್ಕಾರಿ ಆಸ್ಪತ್ರೆಯನ್ನು ವಿಸ್ತರಿಸುವುದು.

ಪ್ರ. 125 (54) ಶ್ರೀ ಪೆಗ್ಗಪ್ಪ ಲಮಾಣಿ (ಬ್ಯಾಡಗಿ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ಧಾರವಾಡ ಜಿಲ್ಲಾ ಬ್ಯಾಡಗಿಯಲ್ಲಿ ಸರ್ಕಾರಿ ಆಸ್ಪತ್ರೆಯನ್ನು ವಿಸ್ತರಿಸುವ ಸಲಹೆಯೊಂದು ಸರ್ಕಾರದವರಲ್ಲಿದೆಯೇ;

(ಆ) ಹಾಗಿದ್ದಲ್ಲಿ ಎಷ್ಟು ಹಾಸಿಗೆಯ ಆಸ್ಪತ್ರೆಯನ್ನಾಗಿ ಮಾರ್ಪಡಿಸಲಾಗುವುದು ಮತ್ತು ಎಷ್ಟು ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು).—

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.

ಪ್ರ. 126 (66) ಶ್ರೀ ಕೆ. ಚೆನ್ನಬಸವನಗೌಡ (ಕೂಡ್ಲಿಗಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ವಿಷಯ: ಎಲ್ಲಾ ಕಡೆಗಳಲ್ಲಿಯೂ ಹೆಚ್ಚುತ್ತಿರುವ ಅಗ್ನಿ ದುರಂತಗಳನ್ನು ತಡೆಗಟ್ಟಲು ಸರ್ಕಾರದವರು ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ತೆರೆಯಲು ಕ್ರಮ ತೆಗೆದುಕೊಳ್ಳುತ್ತಿರುವರೇ?

ಶ್ರೀ ರಮೇಶ್ ಜಿಗಜಿನ್ನಿ (ಮಾನ್ಯ ಗೃಹಖಾತೆಯ ರಾಜ್ಯ ಸಚಿವರು).—

ಅಗ್ನಿಶಾಮಕ ಠಾಣೆಗಳನ್ನು ಆದ್ಯತಾನುಸಾರವಾಗಿ ಜಿಲ್ಲಾ ಕೇಂದ್ರಗಳಲ್ಲಿ ಮೊದಲನೆಯ ಹಂತದಲ್ಲಿಯೂ ಮತ್ತು ಉಪವಿಭಾಗ ಕೇಂದ್ರಗಳಲ್ಲಿ ಎರಡನೆಯ ಹಂತದಲ್ಲಿಯೂ ಸ್ಥಾಪಿಸಲಾಗುವುದು. ಮೂರನೆಯ ಹಂತದಲ್ಲಿ ಹಾಲಿ ಇರುವ ಸ್ಥಳೀಯ ಸಂಸ್ಥೆಗಳ ಅಗ್ನಿಶಾಮಕ ಠಾಣೆಗಳನ್ನು ಸರ್ಕಾರವು ವಹಿಸಿಕೊಳ್ಳುವುದು. ರಾಜ್ಯದಲ್ಲಿ ಸ್ಥಾಪಿಸಲಾಗುವ ಅಗ್ನಿಶಾಮಕ ಠಾಣೆಗಳ ಬಗ್ಗೆ ಇದು ಸರ್ಕಾರದ ಸಾಮಾನ್ಯ ನೀತಿಯಾಗಿದೆ. ಅಗ್ನಿಶಾಮಕ ಠಾಣೆಗಳನ್ನು ಎಲ್ಲೇ ಸ್ಥಾಪಿಸಲಿ ಅವು ಅಲ್ಲಿಂದ 40 ಕಿ.ಮೀ. ಘಾಸಲೆಯಲ್ಲಿ ಬರುವ ಅಗ್ನಿಶಾಮಕ ಕರೆಗಳನ್ನು ನಿರ್ವಹಿಸುತ್ತವೆ. ಒಂದು ಅಗ್ನಿಶಾಮಕ ಠಾಣೆಗೆ ತಗಲುವ ಆವರ್ತ ವೆಚ್ಚ ರೂ. 31,00,000·00 ಮತ್ತು ಆವರ್ತ ವೆಚ್ಚ ರೂ. 4,00,000·00 ಅಗ್ನಿಶಾಮಕ ಠಾಣೆಗೆ ತಗಲುವ ಭಾರಿ ವೆಚ್ಚದಿಂದ ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿಯೂ ಅಗ್ನಿಶಾಮಕ ಠಾಣೆಯನ್ನು ತೆರೆಯಲು ಸಾಧ್ಯವಾಗಿಲ್ಲ.

ವಿಷಯ: ಬೆಲೆ ಏರಿಕೆಯ ನಿಯಂತ್ರಣದ ಬಗ್ಗೆ ಸಂಪುಟದ ಉಪಸಮಿತಿ.

ಪ್ರ. 100 ಶ್ರೀ ಕೆ. ಪಚ್. ರಂಗನಾಥ್ (ಹಿರಿಯೂರು).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ಆಹಾರಧಾನ್ಯಗಳ ಬೆಲೆ ಏರಿಕೆಯ ನಿಯಂತ್ರಣದ ಬಗ್ಗೆ ಸಲಹೆ ಮಾಡಲು ಸಂಪುಟದ ಉಪಸಮಿತಿ ರಚಿಸಲ್ಪಟ್ಟಿತ್ತೆ?